5

ಕರ್ನಾಟಕ ಸರ್ಕಾರ

ಕ್ರ. ಸಂ: ತಾಂ. ಆಡಳಿತ 2/98-99

ನಿರ್ದೇಶಕರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು
ದಿನಾಂಕ: 30-4-1998.

## ಸುತ್ತೋಲೆ

ವಿಷಯ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಾಕಿ ಉಳಿದಿರುವ ಕಡತಗಳನ್ನು ಶೀಘ್ರವಾಗಿ ವಿಲೇವಾರಿಗೊಳಿಸುವ ಬಗ್ಗೆ ಸೂಚನೆಗಳು - ಕಡತ ವಿಲೇವಾರಿ ಆಂದೋಲನ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂ: ಸಿಆಸುಇ 26 ಇಅಸು:98 ದಿನಾಂಕ: 19-3-98

—: :—

ಉಲ್ಲೇಖದಲ್ಲಿ ತಿಳಿಸಿರುವ ಸರ್ಕಾರದ ಸುತ್ತೋಲೆಯನ್ವಯ ಭೂಮಾಪನ ಇಲಾಖೆಯಲ್ಲಿ ಬಾಕಿ ಇರುವ ಕಡತಗಳನ್ನು ದಿನಾಂಕ: 19-3-98 ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕೂಡಲೇ ವಿಲೇವಾರಿ ಮಾಡಲು ಎಲ್ಲಾ ಹಂತದಲ್ಲೂ ಕ್ರಮ ಜರುಗಿಸತಕ್ಕದ್ದು. ಆದುದರಿಂದ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರು ಹಾಗೂ ತಾಲ್ಲೂಕು ಭೂಮಾಪನ ಕಛೇರಿಗಳಲ್ಲಿ ವಿಲೇವಾರಿ ಆಗದೇ ಇರುವ ಕಡತಗಳನ್ನು ಮುಖ್ಯವಾಗಿ ಸಾರ್ವಜನಿಕರಿಂದ ಅರ್ಜಿ ಬಂದಿರುವ ವಿಲೇವಾರಿ ಆಗದೇ ಬಾಕಿ ಉಳಿದಿರುವ ಪ್ರಕರಣಗಳನ್ನು ಕೂಡಲೇ ಪಟ್ಟಿ ಮಾಡಿ ಮೇಲಿನ ಸುತ್ತೋಲೆಯಲ್ಲಿ ತಿಳಿಸಿರುವಂತೆ ಮೇ 31 ರೊಳಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳತಕ್ಕದ್ದು. ಈ ವಿಚಾರದಲ್ಲಿ ಸಾರ್ವಜನಿಕರಿಂದ ಬಂದಿರುವ ಎಲ್ಲಾ ಹದ್ದುಬಸ್ತು ಹಾಗೂ ತುರ್ತಾಗಿ ವಿಲೇವಾರಿ ಮಾಡಬೇಕಾದ ಮ್ಯುಟೇಶನ್ ಪೋಡಿ ಕಡತಗಳನ್ನು ಮತ್ತು ತಿದ್ದುಪಡಿ ಕಡತಗಳನ್ನು ಕಛೇರಿವಾರು ಬಾಕಿ ಪಟ್ಟಿ ಮಾಡಿ ಅವುಗಳನ್ನು ತುರ್ತು ವಿಲೇವಾರಿ ಮಾಡಲು ಆದ್ಯತೆ ಮೇಲೆ ಕ್ರಮ ಕೈಗೊಳ್ಳತಕ್ಕದ್ದು. ಸರ್ಕಾರ ಹಾಗೂ ಮೇಲಾಧಿಕಾರಿಗಳಿಂದ ಬಂದಿರುವ ಮತ್ತು ಆಯಾ ಕಛೇರಿಗಳಲ್ಲಿ ಬಾಕಿ ಇರುವ ಎಲ್ಲಾ ತುರ್ತು ಪತ್ರ ವ್ಯವಹಾರಗಳ ಬಗ್ಗೆ ಅಂತಿಮ ಕ್ರಮ ಜರುಗಿಸಿ ಕೂಡಲೇ ಉತ್ತರ ಕಳುಹಿಸತಕ್ಕದ್ದು. ಇಲಾಖೆಯ ಪ್ರತಿಯೊಂದು ಕಛೇರಿಯಲ್ಲಿಯೂ ಎಲ್ಲಾ ವಿಷಯಗಳೂ ಸೇರಿದಂತೆ ವಿಷಯವಾರು ಬಾಕಿ ಪಟ್ಟಿ ತಯಾರಿಸಿ ಕೂಡಲೇ ಸಂಬಂಧಿಸಿದ ಪತ್ರ ಹಾಗೂ ಕಡತಗಳನ್ನು ಪ್ರತಿದಿನ ಕಛೇರಿಯ ಮುಖ್ಯಸ್ಥರು ಪರಿಶೀಲಿಸಿ ಸಂಬಂಧಿಸಿದವರಿಗೆ ಅಗತ್ಯ ಸೂಚನೆ ನೀಡಿ ಕ್ರಮ ಜರುಗಿಸಲು ಸೂಚಿಸಿದೆ. ಈ ವಿಚಾರವನ್ನು ಬಹಳ ಮಹತ್ವವೆಂದು ಪರಿಗಣಿಸಿ ಸಂಬಂಧಿಸಿದ ಕಛೇರಿ ಮುಖ್ಯಸ್ಥರು ಸಿಬ್ಬಂಧಿ ನೌಕರರ ಸ್ಥಿತಿಗತಿ ವಿವರಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಜರುಗಿಸತಕ್ಕದ್ದು. ಒಂದು ವೇಳೆ ಈ ವಿಚಾರದಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಸಿ. ಶ್ರೀ ...

ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು

ನಕಲನ್ನು: ಇಲಾಖೆಯ ಎಲ್ಲಾ ಭೂದಾಖಲೆಗಳ ಜಂಟಿ ನಿರ್ದೇಶಕರು : ಭೂದಾಖಲೆಗಳ ಉಪ ನಿರ್ದೇಶಕರು ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.